ಪರಿಚಯವಿಲ್ಲದ ಕವಿಗಳೇ ಇಲ್ಲ ಎನ್ನುವಷ್ಟು ಖ್ಯಾತರು! ಜಿ.ಪಿ. ರಾಜರತ್ನಂ ಮತ್ತು ಚಿ. ಶ್ರೀನಿವಾಸ ರಾಜು ಅವರನ್ನು 'ಸಾಹಿತ್ಯ ಪರಿಚಾರಕರು' ಎನ್ನುತ್ತಿದ್ದಂತೆ, ನಾವು ಕೆಲವರು ಬಾ.ಕಿ.ನ.ರನ್ನು 'ಸಾಹಿತ್ಯದ ಪುಢಾರಿ' ಎಂದು ತಮಾಷೆ ಮಾಡುತ್ತಿದ್ದೆವು. ಕಳೆದ ಇಪ್ಪತ್ತೈದು ವರ್ಷಗಳಿಂದ 'ಗಾಂಧಿ ಬಜಾರ್' ಎಂಬ ಕಿರು ಸಾಹಿತ್ಯ ಪತ್ರಿಕೆಯನ್ನು ಪ್ರಕಟಿಸುತ್ತಾ ಬಂದಿರುವ ಸಾಹಸಿ.

ನಾನು ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಅವರು ಪು.ತಿ.ನ. ಅವರ 'ಸಮಗ್ರ ಕವಿತೆಗಳು' ಪ್ರಕಟಣೆಯ ಕೆಲಸದಲ್ಲಿ ತೊಡಗಿಕೊಂಡಿದ್ದರು. ನನ್ನನ್ನು ಕಂಡ ಕೂಡಲೇ 'ನಡೀರಿ, ಪು.ತಿ.ನ.ರಲ್ಲಿಗೆ ಹೋಗಿ ಬರೋಣ, ಹೇಗೂ ಕ್ಯಾಮರಾ ತಂದಿದ್ದೀರಿ. ಒಂದೆರಡು ಫೋಟೊ ತೆಗೆಯೋಣ!' ಎಂದರು. ಕವಿಗಳ ಭೇಟಿ ಎಂದರೆ ಸಂತೋಷವಾಗದೆ ಇರುತ್ತದೆಯೆ?

1960ರ ದಶಕದಲ್ಲಿ, ಬೆಂಗಳೂರಿನಲ್ಲಿ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದಾಗ, ಬಾ.ಕಿ.ನ. ಸೇರಿದಂತೆ ನಾವು ಮೂರು ನಾಲ್ಕು ಮಂದಿ ಗೆಳೆಯರು, ಬಿಡುವಿದ್ದಾಗ ಸಾಹಿತಿಗಳ ಮನೆಗೆ ಹೋಗಿ ಅವರಿಗೆ ಕಿರುಕುಳ ನೀಡುತ್ತಿದ್ದ ಹವ್ಯಾಸಿಗಳಾಗಿದ್ದೆವು. ಹಾಗೇ ಎಷ್ಟೋ ಮಂದಿ ಹಿರಿಯ ಲೇಖಕರ ಪರಿಚಯ ನಮಗಾಗಿತ್ತು. ನಾನು ಮದರಾಸಿಗೆ ಹೋದನಂತರ ಆ ರೂಢಿ ತಪ್ಪಿ ಹೋಗಿ, ಅನೇಕ ಹೊಸ ಲೇಖಕರ ಪರಿಚಯ ನನಗಿರಲಿಲ್ಲ.

ಬಾ.ಕಿ.ನ.ರ ಮೋಟಾರು ಬೈಕಿನಲ್ಲಿ ಕುಳಿತು ಜಯನಗರದತ್ತ ಹೊರಟಾಗ ನನಗೆ ಆ ಹಿಂದಿನ ದಿನಗಳು ನೆನಪಾದವು. ಕನ್ನಡ ಸಾಹಿತ್ಯ ತನ್ನ ಸಂಪ್ರದಾಯದ ಮುಸುಕು ತೆಗೆದು ನವೋದಯ, ನವ್ಯ, ನವ್ಯೋತ್ತರ, ಪ್ರಗತಿಶೀಲ, ದಲಿತ ಬಂಡಾಯ ಇತ್ಯಾದಿ ಕವಲಾಗಿ ಚಿಗುರೊಡೆಯುತ್ತಿದ್ದ ಸಂದರ್ಭ. ನವ್ಯದ ಪ್ರಭಾವದಿಂದ ಪದ್ಯದಂತೆ ಗದ್ಯವೂ ಹೊಸ ಶೈಲಿ, ಹೊಸ ರೂಪು ಪಡೆದುಕೊಳ್ಳತೊಡಗಿತ್ತು. ಸಾಂಪ್ರದಾಯಿಕ ಓದುಗರು ಪತ್ರಿಕೆಯಲ್ಲಿ ಹೊಸ ಕವಿತೆ ಪ್ರಕಟವಾದಾಗ ಅದನ್ನು ಸೂಕ್ಷ್ಮವಾಗಿ ಅವಲೋಕಿಸುವ, ವಿಮರ್ಶಿಸುವ, ಟೀಕಿಸುವ ವಾತಾವರಣವಿತ್ತು. ಹೊಸದಾಗಿ ಬರೆಯಲು ಪ್ರಾರಂಭಿಸಿದ್ದವರು ತನ್ನ ಕೃತಿ ನವ್ಯವೋ ನವೋದಯವೋ ಎಂದು ಗೊಂದಲದಲ್ಲಿ ಬೀಳುತ್ತಿದ್ದುದುಂಟು! ಆಗ ಬರೆಯುತ್ತಿದ್ದವರ ಪೈಕಿ ಹೆಚ್ಚಿನವರು ಕಾಲೇಜು ಮೇಷ್ಟರುಗಳಾಗಿದ್ದು, ಅವರ ಶಿಷ್ಯರು ತಮ್ಮ ತಮ್ಮ ಗುರುಗಳ ಬಣಗಳಲ್ಲಿ ಗುರುತಿಸಿಕೊಳ್ಳುತ್ತಿದ್ದರು. ತಮಗಾದವರನ್ನು ಪದ್ಯಗಳ ಮೂಲಕ ತೆಗಳುವ ಧೀಮಂತ ಕವಿಗಳಿದ್ದರು. ಆಗ ಹುಡುಗಿಯ ಹೆಸರಿನಲ್ಲಿ ಕವಿತೆ ಬರೆಯುತ್ತಿದ್ದವರೊಬ್ಬರಿದ್ದು, ಅವರು ಯಾರಾಗಿರಬಹುದು ಎಂದು ಪತ್ತೆಹಚ್ಚಲು ತಲೆಕೆರೆದುಕೊಳ್ಳುವವರಿದ್ದರು. ಹಿರಿಯ ಕವಿಗಳನ್ನು ಹಿಗ್ಗಾ ಮುಗ್ಗಾ ತರಾಟೆಗೆ ತೆಗೆದುಕೊಳ್ಳುವ ಮರಿ ಕವಿಗಳು ಹುಟ್ಟಿ ಬಂದಿದ್ದರು.

ನವ್ಯ–ಭವ್ಯ, ದಲಿತ –ಬಲಿತ ಇತ್ಯಾದಿ ಪದ–ಪ್ರಾಸಗಳು ಬಳಕೆಗೆ ಬಂದಿದ್ದವು. ಜೊತೆಗೆ ನವೋದಯ 'ಸುಲಿದ ಬಾಳೆಯ ಹಣ್ಣು' ಮತ್ತು ನವ್ಯ 'ಕಬ್ಬಿಣದ ಕಡಲೆ' ಎಂಬ ವಿಚಾರಗಳು ಪ್ರಚಲಿತವಾಗಿದ್ದವು! ಆಗ ಪ್ರಕಟವಾಗಿದ್ದ ನನ್ನ ಒಂದೆರಡು ಕತೆಗಳನ್ನು 'ನವ್ಯ' ಎಂದ ಗೆಳೆಯರು ನನ್ನನ್ನು ನವ್ಯದ ಸುಳಿಗೆ ಸಿಕ್ಕಿ ಒದ್ದಾಡುವಂತೆ ಮಾಡಿದ್ದರು! ನಾನು ಮದರಾಸಿನಲ್ಲಿದ್ದುಕೊಂಡೇ ಈ ಎಲ್ಲ ಸಂಘರ್ಷಗಳನ್ನು ಗಮನಿಸುತ್ತ ಬಂದಿದ್ದೆ.

ಪು.ತಿ.ನ.(ಪುರೋಹಿತ ತಿರುನಾರಾಯಣ ನರಸಿಂಹಾಚಾರ್ಯ)ರ ಭೇಟಿಯ ಬಗ್ಗೆ ನನ್ನಲ್ಲಿ ಒಂದು ಬಗೆಯ ಕುತೂಹಲ. ಹಿರಿಯ ತಲೆಮಾರಿನವರಾದ್ದರಿಂದ ಅವರ ಸ್ವಭಾವ, ನಡವಳಿಕೆ ಹೇಗಿರುತ್ತವೋ ಎಂಬ ಅಳುಕೂ ಇತ್ತು. ಅವರನ್ನು ಅವರ ಕೆಲವು ಕೃತಿಗಳ ಮೂಲಕವಷ್ಟೇ